(ರೂ. ಲಕ್ಷಗಳಲ್ಲಿ)

ಅ)	ತಾಲ್ಲೂಕು	ವರ್ಷ	ನಿಗದಿ	ಬಿಡುಗಡೆ	ಖರ್ಚು
	ಸಕಲೇಶಪುರ	1994-95	46.776	46.281	32.906
	ಸಕಲೇಶಪುರ	1995-96 (31-1-96ರವರೆಗೆ)	61.299	24.625	22.304
	ಆಲೂರು	1994-95	32.465	29.981	24.091
	ಆಲೂರು	1995-96 (31-1-96ರವರೆಗೆ)	29.706	17.375	16.052

ಆ)	ತಾಲ್ಲೂಕು	ವರ್ಷ	ನಿಗದಿ	ಬಿಡುಗಡೆ	ಖರ್ಚು
	ಸಕಲೇಶಪುರ	1994-95	37.024	9.257	46.281
	ಸಕಲೇಶಪುರ	1995-96 (31-1-96ರವರೆಗೆ)	19.700	4.925	24.625
	ಆಲೂರು	1994-95	23.984	5.997	29.981
	ಆಲೂರು	1995-96 (31-1-96ರವರೆಗೆ)	13.900	3.475	17.375

ಇ)	ತಾಲ್ಲೂಕು	ನಳ ನೀರು ಸರಬರಾಜು ಯೋಜನೆಗಳು	ಕಿರಿ ನೀರು ಸರಬರಾಜು ಯೋಜನೆಗಳು
1.	ಸಕಲೇಶಪುರ	17	13
2.	ಆಲೂರು	34	5
	ಒಟ್ಟು	**51**	**18**

ಜವಾಹರ್ ಯೋಜನೆಯ ಅನುಷ್ಠಾನಕ್ಕಾಗಿ ವೀಕ್ಷಕರ ನೇಮಕ.

648 - ಶ್ರೀ ಬಿ.ಬಿ. ಶಿವಪ್ಪ (ಸಕಲೇಶಪುರ) : ಮಾನ್ಯ ಗ್ರಾಮೀಣಾಭಿವೃದ್ಧಿ ಪಂಚಾಯತ್ ರಾಜ್ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಜವಾಹರ್ ರೋಜ್‌ಗಾರ್ ಯೋಜನೆಯಡಿಯಲ್ಲಿ ನಡೆಯುವ ಎಲ್ಲಾ ಕಾರ್ಯಕ್ರಮಗಳ ಅನುಷ್ಠಾನದ ಬಗ್ಗೆ ಒಂದು ವೀಕ್ಷಕ ಸಮಿತಿ ರಚಿಸಬೇಕೆಂದು ಈ ವಿಷಯದಲ್ಲಿ ಕೇಂದ್ರ

ಸರ್ಕಾರದವರು ಮಾರ್ಗದರ್ಶನ ನೀಡಿರುವರೆ,

ಅ) ಹಾಗಿದ್ದಲ್ಲಿ ಪ್ರತಿ ಗ್ರಾಮಕ್ಕೆಂದು ಪೀಕ್ಷಕ ಸಮಿತಿಗಳನ್ನು ನೇಮಿಸಲು ಸರ್ಕಾರ ಕ್ರಮ ಕೈಗೊಂಡಿದೆಯೇ,

ಇ) ಹಾಗಿದ್ದಲ್ಲಿ ಎಂದು ರಚಿಸಲಾಗುವುದು?

ಶ್ರೀ ಎಂ. ಪಿ. ಪ್ರಕಾಶ್ (ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಸಚಿವರು) :

ಅ) ಹೌದು.

ಆ) ಹೌದು.

ಇ) ಪ್ರತಿ ಗ್ರಾಮ ಪಂಚಾಯತ್ ಎಲ್ಲಾ ಗ್ರಾಮಗಳಲ್ಲಿ ಗ್ರಾಮ ಸಭೆಗಳ ಮುಖಾಂತರ ವೀಕ್ಷಕ ಸಮಿತಿಗಳನ್ನು ರಚಿಸಲು ದಿನಾಂಕ 30-10-95ರ ಸುತ್ತೋಲೆಯಲ್ಲಿ ತಿಳಿಸಲಾಗಿದೆ.

ತುಮಕೂರಿನಲ್ಲಿ ವರ್ತುಲ ರಸ್ತೆ ನಿರ್ಮಿಸುವ ಬಗ್ಗೆ.

650 - ಶ್ರೀ ಎಸ್. ಶಿವಣ್ಣ (ತುಮಕೂರು) ಮಾನ್ಯ ಲೋಕೋಪಯೋಗಿ ಮಂತ್ರಿಗಳು ಈ ಕಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ವರ್ತುಲ ರಸ್ತೆ (ರಿಂಗ್ ರಸ್ತೆ) ನಿರ್ಮಾಣ ಹಂತವು ತುಮಕೂರಿನಲ್ಲಿ ಪ್ರಾರಂಭವಾಗಿದೆಯೇ?

ಆ) ತುಮಕೂರು ನಗರದ ಬೈಪಾಸ್ ರಸ್ತೆ ನಿರ್ಮಿಸುವ ವಿಚಾರ ಸರ್ಕಾರದ ಆಲೋಚನೆಯಲ್ಲಿದೆಯೇ? ಇದ್ದರೆ ಯಾವಾಗ ಪ್ರಾರಂಭಿಸಲಾಗುವುದು?

ಶ್ರೀ ಶಿವಾನಂದ ಹೆಚ್. ಕೌಜಲಗಿ (ಲೋಕೋಪಯೋಗಿ ಸಚಿವರು) :

ಅ) ಇಲ್ಲ.

ಆ) ತುಮಕೂರು ನಗರದಲ್ಲಿ ಹಾದು ಹೋಗುತ್ತಿರುವ ರಾಷ್ಟ್ರೀಯ ಹೆದ್ದಾರಿ 4ಕ್ಕೆ ಈಗಾಗಲೇ ಬೈಪಾಸನ್ನು ನಿರ್ಮಿಸಲಾಗಿದೆ.

ಪಂಚಾಯತ್ ರಾಜ್ ಆದಳಿತಕ್ಕೆ ಹೆಚ್ಚಿನ ಹಣ.

651 - ಶ್ರೀ ಎಸ್. ಶಿವಣ್ಣ (ತುಮಕೂರು) : ಮಾನ್ಯ ಗ್ರಾಮೀಣಾಭಿವೃದ್ಧಿ ಪಂಚಾಯತ್ ರಾಜ್ ಸಚಿವರು ಈ ಕಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಗ್ರಾಮ, ತಾಲ್ಲೂಕು ಹಾಗೂ ಜಿಲ್ಲಾ ಪಂಚಾಯತಿಗಳಿಗೆ ಹೆಚ್ಚಿನ ಹಣ ನೀಡುವ ಬಗ್ಗೆ ಸರ್ಕಾರ ಏನಾದರೂ ತೀರ್ಮಾನ ಮಾಡಿದೆಯೇ?

ಆ) ಈಗ ನೀಡುತ್ತಿರುವ ಮೊತ್ತವೆಷ್ಟು?

ಇ) ನೀಡಲು ತೀರ್ಮಾನಿಸಿರುವ ಮೊತ್ತವೆಷ್ಟು?